(ಇಂದು ದಿನಾಂಕ 15-07-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದ-**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿಪತ್ರಿಕೆಯನ್ನು ನಿ.ಪಿ.1 ಎಂದು, ಸ.ನಂ. 53/3 ರ ಪಹಣಿಪತ್ರಿಕೆಯನ್ನು ನಿ.ಪಿ.2 ಎಂದು, ನಮೂನೆ -4 ರ ದೃಢೀಕೃತ ಪ್ರತಿಯನ್ನು ನಿ.ಪಿ. 3 ಎಂದು, ಆಕಾರ ಬಂದ್ ಉತಾರಿನ ದೃಢೀಕೃತ ಪ್ರತಿಯನ್ನು ನಿ.ಪಿ. 4 ಎಂದು, ಹೇಳಿಕೆಯ ದೃಢೀಕೃತ ಪ್ರತಿಯನ್ನು ನಿ.ಪಿ.5 ಎಂದು, ನೋಟಿಸ್‌ನ ಪ್ರತಿಯನ್ನು ನಿ.ಪಿ. 6 ಎಂದು, ದಿನಾಂಕಃ 17-05-2019 ರಂದು 3 ನೇ ವಾದಿ ನೀಡಿರುವ 2 ಅರ್ಜಿಗಳ ಪ್ರತಿಯನ್ನು ನಿ.ಪಿ.7 ಮತ್ತು 8 ಎಂದು, ದಿನಾಂಕಃ 29-06-2019 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಿಂದ ನೀಡಲಾದ ಹಿಂಬರಹವನ್ನು ನಿ.ಪಿ. 9 ಎಂದು, ನೋಟಿಸ್‌ನ ಪ್ರತಿಯನ್ನು ನಿ.ಪಿ. 10 ಎಂದು, ದಿನಾಂಕ 19-09-2019 ರಂದು ವಕೀಲರ ಮೂಲಕ ನೀಡಲಾದ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.11 ಎಂದು, ನೋಟಿಸ್ ಹಿಂದಿರುಗಿದ್ದು, ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಸದರಿ ನೋಟಿಸ್‌ನ ಮೂಲ ಪ್ರತಿಯನ್ನು ನಿ.ಪಿ.11 ರೊಂದಿಗೆ ತಾಳೆ ಮಾಡಿ ನೋಡಲಾಗಿದ್ದು, ಹೊಂದಾಣಿಕೆ ಕಂಡುಬಂದ ಮೇರೆಗೆ ಸದರಿ ಮೂಲ ನೋಟಿಸ್‌ನ್ನು ನಿ.ಪಿ. 12 ಎಂದು, ಅಂಚೆ ಲಕೋಟೆಯನ್ನು ನಿ.ಪಿ. 12(ಎ) ಎಂದು, ಅಂಚೆ ಸ್ವೀಕೃತಿಯನ್ನು ನಿ.ಪಿ.13 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ